| | |
|---|---|
| 6. Sri D.B. Chandre Gowda, MLA Chairman. | Sahyadri Polytechnic, Thirthahalli (Sahyadri Trust). |
| 7. Sri C.V. Venkatarayappa. MLA - Chairman. | K. Venkatapathiappa Trust, Chickballapur (KVT Polytechnic, Chickballapur) |
| 8. Sri Kagodu Thimmappa MLA (as Chairman). | Sanjay Memorial Polytechnic, Sagar (Sanjay Vidya Kendra Sagar). |
| 9. Sri G. Made Gowda, MP, (as President). | Bharathi Education Trust, Polytechnic, Bharathi Nagar (K.M. Doddi). |
| 10. Dr. B.G. Jawali, MP (as Chair man) | HKE Society's Polytechnics:- 1. HKE Society's Womens, Polytechnic, Gulbarga. 2. HKE Society's Boys Polytechnic, Gulbarga. 3. HKE Society's Boys Polytechnic, Raichur. (HKE Society). |
| 11. Sri A. Krishnappa, Minister for Horticulture (as chairman) | Rajiv Gandhi Polytechnic Bangalore - 36. |
| 12. Sri S. Shafi Ahmed, MLA, (as Chirman). | HMS Education Society, HMS Polytechnic, Tumkur. |

## ಸಂಜಯಗಾಂಧಿ ಆಪಘಾತ ಪುನರ್ ನಿವೇಶನ ಕೇಂದ್ರದಲ್ಲಿ ರಸ್ತೆ ಆಪಘಾತ ಗಾಯಾಳುಗಳಿಗೆ ಚಿಕಿತ್ಸೆ

**133:** ಶ್ರೀ ಕೆ.ವಿ. ರವೀಂದ್ರನಾಥ್ ಬಾಬು (ಕೊಟ್ಟೂರ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಜಯಗಾಂಧಿ ಆಪಘಾತ ಪುನರ್ ನಿವೇಶನ ಕೇಂದ್ರದಲ್ಲಿ ರಸ್ತೆ ಆಪಘಾತ ಗಾಯಾಳುಗಳಿಗೆ ಮೂಳೆತಜ್ಞರು ಪ್ಲಾಸ್ಟಿಕ್ ಸರ್ಜನ್ ನರತಜ್ಞ ನ್ಯೂರೋ ಮತ್ತು ಜನರಲ್ ಸರ್ಜನ್‌ಗಳಿಂದ ಚಿಕಿತ್ಸೆ ಮಾಡಲಾಗುತ್ತಿದೆಯೇ;

ಆ) ಮೇಲ್ಕಂಡ ಯಾವುದಾದರೊಂದು ವಿಷಯಗಳಲ್ಲಿ ಪರಿಣತರಾಗಿರುವ ವೈದ್ಯಾಧಿಕಾರಿಯ ಬದಲು, ಪ್ಲಾಸ್ಟಿಕ್ ಸರ್ಜನ್ ವಿಷಯದ ಒಬ್ಬರನ್ನು ಸಂಸ್ಥೆಯ ಮೇಲಾಧಿಕಾರಿಯಾಗಿ ಹೊಂದಿರುತ್ತದೆಯೇ;

ಇ) 1986 ರಿಂದ ಅಡ್ಮಿಷನ್ ಮಾಡಿರುವ ಸಂಖ್ಯೆ ಎಷ್ಟು;

ಈ) ವಿವಿಧ ತಜ್ಞರಿಂದ ದೊಡ್ಡ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗಿದೆಯೇ;

ಉ) ವಿವಿಧ ತಜ್ಞರ ಇಲಾಖೆಯನ್ನು ಬೇರೆಯಾಗಿ ತೆರೆದಿದೆಯೇ;

ಊ) ಯಾಕೆ ಇಂತಹ ಕೋರ್ಸುಗಳನ್ನು ತೆರೆಯಲು ಪ್ರಯತ್ನಿಸಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಸಂಜಯಗಾಂಧಿ ಆಪಘಾತ ಪುನರ್‌ನಿವೇಶನ ಕೇಂದ್ರದಲ್ಲಿ ರಸ್ತೆ ಆಪಘಾತ ಗಾಯಾಳುಗಳಲ್ಲದೆ ಇತರೆ ಆಪಘಾತದಲ್ಲಿ ನೊಂದವರಿಗೂ ಚಿಕಿತ್ಸೆ ನೀಡಲಾಗುತ್ತಿದೆ.

ಹೀಗೆ ಬಂದವರನ್ನು ಮೂಳೆ ತಜ್ಞರು, ಪ್ಲಾಸ್ಟಿಕ್ ಸರ್ಜನ್ ನರತಜ್ಞ(ನ್ಯೂರೋ) ಮತ್ತು ಜನರಲ್ ಸರ್ಜನ್‌ರು ಚಿಕಿತ್ಸೆ ನೀಡುತ್ತಾರೆ. ಹಾಗೂ ಇವರಿಗೆ ಮೊದಲು ಪ್ಲಾಸ್ಟಿಕ್ ಸರ್ಜನ್‌ರು ಚರ್ಮದ ಹೊದಿಕೆಯನ್ನು ನೀಡುತ್ತಾರೆ. ಗಾಯವು ಮಾಗಿದ ಮೇಲೆ ಮೂಳೆ ತಜ್ಞರು ಮೂಳೆಗಳನ್ನು ಹೊಂದಿಸಿ ಜೋಡಿಸುತ್ತಾರೆ.

ಆ) ಈ ಸಂಸ್ಥೆಯಲ್ಲಿ ಪ್ಲಾಸ್ಟಿಕ್ ಸರ್ಜನ್‌ರು ನಿರ್ದೇಶಕರಾಗಿ ಸರ್ಕಾರಿ ಆದೇಶ ಸಂಖ್ಯೆ:ಆಕುಕ:73:ಪಿಟಿಡಿ:92 ದಿನಾಂಕ 20–6–92ರಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರವು ನುರಿತ ಪ್ರಾಧ್ಯಾಪಕ ಮತ್ತು ಇಲಾಖಾ ಮುಖ್ಯಸ್ಥರನ್ನು ಅರ್ಹತೆಯ ಮೇರೆಗೆ ನಿಯಮಾನುಸಾರವಾಗಿ ನಿರ್ದೇಶಕರಾಗಿ ನೇಮಿಸಲಾಗಿದೆ.

| ಇ) | 1986 | 1987 | 1988 | 1989 | 1990 | 1991 | 1992 |
|---|---|---|---|---|---|---|---|
| ಒಳರೋಗಿಗಳು | 988 | 1049 | 1409 | 2386 | 1483 | 1523 | 1527 |
| ಹೊರರೋಗಿಗಳು | 3948 | 3845 | 4191 | 4253 | 4113 | 3740 | 3942 |

ಈ) ವಿವಿಧ ರೀತಿಯ ಶಸ್ತ್ರ ಚಿಕಿತ್ಸೆಗಳನ್ನು ಅಂದರೆ ಮೂಳೆ ತಜ್ಞ, ನರತಜ್ಞತೆ, ಸಾಮಾನ್ಯ ಶಸ್ತ್ರ ಚಿಕಿತ್ಸೆ, ಪ್ಲಾಸ್ಟಿಕ್ ಹಾಗೂ ಫೇಸಿಯಾ ಮಾಕ್ಷಿಲರಿ ಶಸ್ತ್ರ ಚಿಕಿತ್ಸೆ 1991 ರಿಂದ ಆಕ್ಟೋಬರ್ 1992 ರವರೆಗೆ ಮಾಡಿರುವ ಬಗ್ಗೆ ಪ್ರತ್ಯೇಕ ವಿವರಣಾ ಪಟ್ಟಿಯನ್ನು ಲಗತ್ತಿಸಿದೆ.

ಉ) ಮಾಡಿರುವುದಿಲ್ಲ.

ಊ) ಹಣದ ಕೊರತೆ ಮತ್ತು ಸ್ಥಳಾಭಾವದಿಂದ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಾಧ್ಯವಾಗಲಿಲ್ಲ. ನಮ್ಮದೇ ಆದ ಹೊಸ ಕಟ್ಟಡವು ಪ್ರಾರಂಭವಾದಾಗ ಇದರ ಬಗ್ಗೆ ಪರಿಶೀಲಿಸಲಾಗುವುದು.

**STATEMENT OF NUMBER OF MAJOR OPERATIONS CONDUCTED IN DIFFERENT SPECIALITIES SINCE NOVEMBER 1992**

| | Debridement and minor porcedures done by all doctors | closed Reduction | Orthopaedic Operations | Plastic & Facio Maxillary Operations | General Surgery Operations |
|---|---|---|---|---|---|
| Nov. 1992 | 30 | 20 | 21 | 15 | 02 |
| Dec. 1992 | 55 | 16 | 18 | 17 | 02 |
| Jan. 1993 | 23 | 14 | 13 | 13 | 05 |
| Feb. 1993 | 15 | 18 | 10 | 13 | 02 |

## ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳ ಸಾವಿನ ಬಗ್ಗೆ

**824:** ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):–

ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದೆರಡು ವರ್ಷಗಳಿಂದ ಮೈಸೂರಿನ ಮೃಗಾಲಯದಲ್ಲಿ ಸತ್ತಿರುವ ಪ್ರಾಣಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಸಾವಿಗೆ ಕಾರಣಗಳೇನು;

ಆ) ಪ್ರಾಣಿಗಳಿಗೆ ಕಾಯಿಲೆ ಬಂದಾಗ ಇವುಗಳ ಉಪಚಾರದಲ್ಲಿ ಬೇಜವಾಬ್ದಾರಿತನ ಹಾಗೂ ನಿರ್ಲಕ್ಷ್ಯತನವನ್ನು ತೋರುತ್ತಿರುವ ಕಾರಣದಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳು ಸಾಯುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ ಇನ್ನು ಮುಂದೆ ಈ ಪ್ರಾಣಿಗಳಿಗೆ ಸಾವು ಸಂಭವಿಸಿದಾಗ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):–

ಅ) ಕಳೆದೆರಡು ವರ್ಷಗಳಿಂದ ಮೈಸೂರು ಮೃಗಾಲಯದಲ್ಲಿ ಸತ್ತಿರುವ ಪ್ರಾಣಿಗಳ ವಿವರ ಈ ಕೆಳಗಿನಂತಿದೆ:

| | |
|---|---|
| 1990–91 | ಏಪ್ರಿಲ್‌ನಿಂದ ಮಾರ್ಚ್‌ವರೆಗೆ 48 |
| 1991–92 | ಏಪ್ರಿಲ್‌ನಿಂದ ಮಾರ್ಚ್‌ವರೆಗೆ 44 |
| 1992–93 | ಏಪ್ರಿಲ್‌ನಿಂದ ಜನವರಿ 1993ರವರೆಗೆ 41 |

ಅವುಗಳ ಸಾವಿಗೆ ಕಾರಣವನ್ನು ಲಗತ್ತಿಸಿರುವ ತಃಖ್ತೆಯಲ್ಲಿ ಒದಗಿಸಲಾಗಿದೆ.

ಆ) ಇದು ಸತ್ಯಕ್ಕೆ ದೂರವಾಗಿದೆ. ಮೃಗಾಲಯದ ಪ್ರಾಣಿಗಳನ್ನು ಪಶುವೈದ್ಯಾಧಿಕಾರಿಗಳು ನಿತ್ಯವೂ ಪರೀಕ್ಷಿಸಿ ಚಿಕಿತ್ಸೆ ನೀಡುತ್ತಿದ್ದಾರೆ. ಅಗತ್ಯವಿದ್ದಲ್ಲಿ ಇತರ ಪಶುವೈದ್ಯ ತಜ್ಞರ ಸಹಾಯವನ್ನು ಪಡೆದು ಕೊಳ್ಳಲಾಗುತ್ತಿದೆ. ಪ್ರಾಣಿಗಳು ಅಸ್ವಸ್ಥಗೊಂಡಾಗ ಅವುಗಳಿಗೆ ನೀಡಿದ ಚಿಕಿತ್ಸೆಯ ವಿವರಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ಪ್ರಾಣಿಗಳು ಮೃತಪಟ್ಟರೆ ಶವ ಪರೀಕ್ಷೆ ನಡೆಸಿ ಸಾವಿಗೆ ಕಾರಣವನ್ನು ಪತ್ತೆ ಮಾಡಿ ಸಂಬಂಧಪಟ್ಟವರಿಗೆ ವರದಿ ಮಾಡಲಾಗುತ್ತಿದೆ. ಪ್ರತಿಯೊಂದು ಪ್ರಾಣಿಯ